

بسم الله الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15–07–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಧರ್ಮತ್ಯಾಗಿಗಳ ವಿರುದ್ಧ ಮುಸ್ಲಿಮರು ನಡೆಸಿದ ಕಾರ್ಯಾಚರಣೆಗಳ ಪ್ರಸ್ತಾಪ ನಡೆಯುತ್ತಿದೆ. ಹಝ್ರತ್ ಮುಹಾಜಿರ್(ರ)ರಿಗೆ ಸನ್‌ಆದಲ್ಲಿ ಧರ್ಮತ್ಯಾಗಿಗಳ ವಿರುದ್ಧ ವಿಜಯ ಸಾಧಿಸಿದ ನಂತರ ಸ್ಥಿರತೆ ಲಭಿಸಿದಾಗ ಅವರು ಹಝ್ರತ್ ಅಬೂಬಕರ್(ರ)ರಿಗೆ ಈ ಕಾರ್ಯಾಚರಣೆಗಳ ಬಗ್ಗೆ ಮಾಹಿತಿ ನೀಡಿದರು. ಯಮನಿನಲ್ಲಿ ಇರಲು, ಅಥವಾ ಅಲ್ಲಿ ಬೇರೆ ಯಾರನ್ನಾದರೂ ನಿಯಮಿಸಿ ಮದೀನಕ್ಕೆ ಮರಳಿ ಬರಲು ಮುಆಧ್ ಬಿನ್ ಜಬಲ್ ಮತ್ತು ಅಧಿಕಾರಿಗಳಿಗೆ ಹಝ್ರತ್ ಅಬೂಬಕರ್(ರ) ಅಧಿಕಾರ ನೀಡಿದರು. ಆಗ ಎಲ್ಲರೂ ಮದೀನಕ್ಕೆ ಮರಳಿ ಬಂದರು. ಆದರೆ ಹಝ್ರತ್ ಮುಹಾಜಿರ್(ರ)ರನ್ನು ಇಕ್ರಿಮ(ರ)ರ ಜೊತೆಗೆ ಸೇರಿಕೊಂಡು ಹಝ್ರುರ್‌ಮೌತಿನಲ್ಲಿ ಝಿಯಾದ್ ಬಿನ್ ಲಬೀದಿಗೆ ನೆರವು ನೀಡಲು ಆದೇಶಿಸಿದರು. ಹಝ್ರತ್ ಮುಹಾಜಿರ್(ರ) ಅಲ್ಲಿಗೆ ಬರುವ ವರೆಗೂ ಕಿಂದ ಗೋತ್ರದ ಧರ್ಮತ್ಯಾಗಿಗಳ ಮತ್ತು ಝಕಾತ್ ನೀಡುವುದನ್ನು ನಿರಾಕರಿಸಿದವರ ವಿರುದ್ಧ ಯಾವುದೇ ಕಾರ್ಯಾಚರಣೆ ನಡೆಸದಂತೆ ಹಝ್ರತ್ ಝಿಯಾದ್ ಬಿನ್ ಲಬೀದ್(ರ)ರಿಗೆ ನಿರ್ದೇಶನ ನೀಡಲಾಯಿತು. ಹಝ್ರತ್ ಮುಹಾಜಿರ್(ರ) ಸನ್‌ಆದಿಂದ ಮತ್ತು ಹಝ್ರತ್ ಇಕ್ರಿಮ(ರ) ಅಬೀನ್‌ನಿಂದ ಹಝ್ರತ್ ಅಬೂಬಕರ್(ರ)ರ ನಿರ್ದೇಶನ ಪ್ರಕಾರ ಹಝ್ರುರ್‌ಮೌತಿನ ಕಡೆಗೆ ಹೊರಟರು. ಮಆರಿಬ್ ಎಂಬ ಸ್ಥಳದಲ್ಲಿ ಇಬ್ಬರೂ ಭೇಟಿಯಾದರು.

ಕಿಂದದ ಒಬ್ಬ ಯುವಕ ತಪ್ಪಾಗಿ ತನ್ನ ಸಹೋದರನ ಒಂಟೆಯನ್ನು ಝಕಾತಿಗಾಗಿ ಕೊಟ್ಟಿದ್ದರು. ಹಝ್ರತ್ ಝಿಯಾದ್(ರ) ಅದಕ್ಕೆ ಬೆಂಕಿಯ ಕೆಂಡದಿಂದ ಝಕಾತಿನ ಗುರುತು ಹಾಕಿದರು. ಸ್ವಲ್ಪ ಸಮಯದ ನಂತರ ಆ ಯುವಕ ಆ ಒಂಟೆಯನ್ನು ಬದಲಾಯಿಸಲು ಬೇಡಿದನು. ಆದರೆ ಝಿಯಾದ್(ರ) ಒಪ್ಪಲಿಲ್ಲ. ಯುವಕನು ತನ್ನ ಗೋತ್ರದವರನ್ನು ಸಹಾಯಕ್ಕಾಗಿ ಕರೆದನು. ಅಬೂ ಸಮೀತ್ ಮತ್ತು ಅವನ ಜೊತೆಗಾರರು ಬಲವಂತವಾಗಿ ಒಂಟೆಯ ಕಟ್ಟನ್ನು ಬಿಚ್ಚಿದರು. ಅಬೂಸಮೀತ್ ಮತ್ತು ಅವನ ಜೊತೆಗಾರರನ್ನು ಬಂಧಿಸಲಾಯಿತು ಮತ್ತು ಒಂಟೆಯನ್ನು ಕೂಡ ವಶಪಡಿಸಿಕೊಳ್ಳಲಾಯಿತು. ಆ ಜನರು ಇತರ ಗೋತ್ರಗಳ ಜನರನ್ನು ಕೂಡ ಸಹಾಯಕ್ಕಾಗಿ ಕರೆದರು. ಹಝ್ರತ್ ಝಿಯಾದ್(ರ) ದಾಳಿ ನಡೆಸಿ ಅವರ ಅನೇಕ ಜನರನ್ನು ವಧಿಸಿದರು. ಆದರೆ ಕೆಲವರು ಪರಾರಿಯಾದರು. ಹಝ್ರತ್ ಝಿಯಾದ್(ರ) ಆ ಕೈದಿಗಳನ್ನು ಸ್ವತಂತ್ರಗೊಳಿಸಿದರು. ಆದರೆ ಅವರು ಮರಳಿ ಹೋಗಿ ಯುದ್ಧದ ತಯಾರಿಯನ್ನು ಶುರುಮಾಡಿದರು. ಹೀಗೆ ಬನೂ ಅಮ್ರ್, ಬನೂ ಹಾರಿಸ್, ಅಶ್‌ಅಸ್ ಬಿನ್ ಖೈಸ್ ಮತ್ತು ಸಮತ್ ಬಿನ್ ಅಸ್ವದ್ ಝಕಾತ್ ನೀಡುವುದನ್ನು ನಿರಾಕರಿಸಿ ಧರ್ಮತ್ಯಾಗ ಮಾಡಿದರು. ಹಝ್ರತ್ ಝಿಯಾದ್(ರ) ಬನೂ ಅಮ್ರ್ ಗೋತ್ರದ ಮೇಲೆ ದಾಳಿ ನಡೆಸಿದರು. ಅವರ ಅನೇಕ ಜನರನ್ನು ವಧಿಸಿದರು ಮತ್ತು ಅನೇಕರನ್ನು ಬಂಧಿಸಿ ಮದೀನಕ್ಕೆ ಕಳುಹಿಸಿದರು. ಆದರೆ ಮಾರ್ಗ ಮಧ್ಯೆ ಅಶ್‌ಅಸ್ ಮತ್ತು ಬನೂ ಹಾರಿಸ್‌ನ ಜನರು ದಾಳಿ ನಡೆಸಿ ಮುಸ್ಲಿಮರಿಂದ ತಮ್ಮ ಬಂಧಿಗಳನ್ನು ಬಿಡುಗಡೆಗೊಳಿಸಿದರು. ಈ ಘಟನೆಯ ನಂತರ ಆಸುಪಾಸಿನ ಅನೇಕ ಗೋತ್ರಗಳು ಕೂಡ ಆ ಜನರೊಂದಿಗೆ ಸೇರಿಕೊಂಡರು ಮತ್ತು ಅವರು ಕೂಡ ಧರ್ಮತ್ಯಾಗ ಮಾಡಿದ್ದಾಗಿ ಘೋಷಿಸಿದರು. ಕಿಂದದ ಜನರು ಹಝ್ರುರ್‌ಮೌತಿನ ಸಮೀಪವಿರುವ ನಜೀರ್ ಎಂಬ ಹೆಸರಿನ ಒಂದು ಕೋಟೆಯಲ್ಲಿ ಅಡಗಿಗೊಂಡರು.

ಹಝ್ರತ್ ಝಿಯಾದ್(ರ), ಹಝ್ರತ್ ಮುಹಾಜಿರ್(ರ) ಮತ್ತು ಹಝ್ರತ್ ಇಕ್ರಿಮ(ರ)ರ ಸೈನ್ಯ ಐದು ಸಾವಿರ ಮುಹಾಜಿರ್, ಅನ್ಸಾರ್ ಸಹಾಬಿಯರು ಮತ್ತು ಇತರ ಗೋತ್ರದವರನ್ನು ಒಳಗೊಂಡಿತ್ತು. ಇಷ್ಟು ದೊಡ್ಡ ಸೈನ್ಯವನ್ನು ಕಂಡು ನಜೀರ್ ಕೋಟೆಯಲ್ಲಿ ಅವಿತುಕೊಂಡವರು ಭಯಗೊಂಡರು. ಕೋಟೆಯಲ್ಲಿದ್ದವರ ಸರದಾರನಾದ ಅಶ್‌ಅಸ್ ತನ್ನ ಮತ್ತು ತನ್ನ 9 ಜೊತೆಗಾರರಿಗೆ ಅಭಯ ನೀಡಬೇಕೆಂಬ ನಿಬಂಧನೆಯೊಂದಿಗೆ ಕೋಟೆಯ ಬಾಗಿಲನ್ನು ತೆರೆದರು. ಘೋರವಾದ ಯುದ್ಧ ನಡೆದ ನಂತರ ಮುಸ್ಲಿಮರಿಗೆ ವಿಜಯ ಲಭಿಸಿತು. ವಿಜಯದ ಸುದ್ದಿ ಮತ್ತು ಬಂಧಿಗಳೊಂದಿಗೆ ಹಝ್ರತ್ ಇಕ್ರಿಮ(ರ) ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಅಬೂಬಕರ್(ರ) ಸಕಲ ಬಂಧಿಗಳನ್ನು ಸ್ವತಂತ್ರಗೊಳಿಸಿದರು.

ಹಝ್ರತ್ ಉಮರ್(ರ)ರ ಕಾಲಘಟ್ಟದಲ್ಲಿ ಇರಾಕ್ ಮತ್ತು ಸಿರಿಯದ ಯುದ್ಧಗಳಲ್ಲಿ ಅಶ್‌ಅಸ್ ಹಿರಿದಾದ ಸಾಧನೆಯನ್ನು ಮಾಡಿದರು. ಆದ್ದರಿಂದ ಅವರ ಗೌರವ ವರ್ಧಿಸಿತು. ಪೂರ್ಣ ರೀತಿಯಲ್ಲಿ ಶಾಂತಿ ಮತ್ತು ಸಮಾಧಾನ ಸ್ಥಾಪನೆಗೊಳ್ಳುವ ತನಕ ಹಝ್ರತ್ ಮುಹಾಜಿರ್(ರ) ಮತ್ತು ಹಝ್ರತ್ ಇಕ್ರಿಮ(ರ) ಹಝ್ರುರ್‌ಮೌತ್ ಮತ್ತು ಕಿಂದದಲ್ಲೇ ತಂಗಿದರು. ಧರ್ಮತ್ಯಾಗಿ ದಂಗೆಗಾರರ ವಿರುದ್ಧ ಇವು ಕೊನೆಯ ಯುದ್ಧಗಳಾಗಿದ್ದುವು.

ಇದರ ನಂತರ ಅರೇಬಿಯದಿಂದ ದಂಗೆ ಸಂಪೂರ್ಣವಾಗಿ ಕೊನೆಗೊಂಡಿತು ಮತ್ತು ಎಲ್ಲ ಗೋತ್ರಗಳು ಇಸ್ಲಾಮಿನ ಆಡಳಿತದ ಅಧೀನದಲ್ಲಿ ಬಂದುವು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ನಂತರ ಪ್ರವಾದಿತ್ವ ವಾದ ಮಾಡಿದ ಪ್ರತಿಯೊಬ್ಬ ವ್ಯಕ್ತಿಯ ವಿರುದ್ಧ ಸಹಾಬಿಯರು ಯುದ್ಧ ಮಾಡಿದ್ದರು ಎಂದು ಮೌಲಾನ ಮೌದೂದಿ ಸಾಹಿಬ್ ಬರೆದದ್ದು ಸಹಾಬರ ಹೇಳಿಕೆಗೆ ವಿರುದ್ಧವಾದುದಾಗಿದೆ. ಇಸ್ಲಾಮಿನ ಸಾಹಿತ್ಯಗಳನ್ನು ಚೆನ್ನಾಗಿ ಓದಿದ್ದಾಗಿ ಮೌಲಾನ ಸಾಹಿಬರು ಬಹಳವಾಗಿ ವಾದಿಸುತ್ತಾರೆ. ಆದರೆ ಈ ವಿಷಯದ ಬಗ್ಗೆ ಅಭಿಪ್ರಾಯ ಪ್ರಕಟಿಸುವುದಕ್ಕೆ ಮುಂಚಿತವಾಗಿ ಇಸ್ಲಾಮಿನ ಚರಿತ್ರೆಯನ್ನು ಅವರು ಓದಿ ನೋಡಿದ್ದರೆ, ಮುಸೈಲಿಮ ಕದ್ದಾಬ್, ಅಸ್ವದ್ ಅನ್ಸಿ, ಸಜಾಹ್ ಬಿನ್ತ್ ಹಾರಿಸ್ ಮತ್ತು ತುಲೈಹ ಬಿನ್ ಖುವೈಲಿದ್ ಅಸದಿ ಇವರೆಲ್ಲರೂ ಮದೀನದ ಆಡಳಿತವನ್ನು ಅನುಸರಿಸುವುದನ್ನು ನಿರಾಕರಿಸಿದವರು ಮತ್ತು ತಮ್ಮ ತಮ್ಮ ಪ್ರದೇಶಗಳಲ್ಲಿ ತಮ್ಮ ಆಡಳಿತಗಳ ಘೋಷಣೆ ಮಾಡಿದವರು ಆಗಿದ್ದರು ಎಂದು ಗೊತ್ತಾಗುತ್ತಿತ್ತು. ಸಹಾಬಿಯರು ಯುದ್ಧ ಮಾಡಿದ್ದು ಆಡಳಿತದ ವಿರುದ್ಧ ದಂಗೆಯೆದ್ದಿದ್ದ ಜನರ ವಿರುದ್ಧ ಆಗಿತ್ತು. ಅವರು ತೆರಿಗೆ ಪಾವತಿ ಮಾಡುವುದನ್ನು ನಿರಾಕರಿಸಿದ್ದರು ಮತ್ತು ಮದೀನದ ಮೇಲೆ ದಾಳಿ ನಡೆಸಿದ್ದರು. ತಿರುಚಿ ಮತ್ತು ವಕ್ರವಾಗಿ ಇಸ್ಲಾಮಿನ ಚರಿತ್ರೆಯನ್ನು ಮುಂದಿರಿಸುವ ಜನರು ಇಸ್ಲಾಮಿನ ಸೇವೆಯನ್ನು ಮಾಡುತ್ತಿಲ್ಲ. ಅವರ ಉದ್ದೇಶ ಇಸ್ಲಾಮಿನ ಸೇವೆಯಾಗಿದ್ದರೆ ಅವರು ಸತ್ಯಕ್ಕೆ ಅತ್ಯಂತ ಉನ್ನತ ಸ್ಥಾನ ನೀಡುತ್ತಿದ್ದರು ಮತ್ತು ತಪ್ಪು ಹೇಳಿಕೆ ಹಾಗೂ ಘಟನೆಗಳನ್ನು ವಿರೂಪಗೊಳಿಸಿ ಮುಂದಿರಿಸುವುದರಿಂದ ದೂರವಿರುತ್ತಿದ್ದರು.

ಒಬ್ಬ ಚರಿತ್ರೆಗಾರ ಬರೆಯುತ್ತಾರೆ: ಈಗ ಅರೇಬಿಯದ ಎಲ್ಲ ಬಂಡಾಯಗಾರರ ಕೊನೆಯಾಗಿತ್ತು ಮತ್ತು ಎಲ್ಲ ಧರ್ಮತ್ಯಾಗಿಗಳನ್ನು ದಮನಿಸಲಾಗಿತ್ತು. ದೇಶವನ್ನು ಪೂರ್ತಿಯಾಗಿ ಸುತ್ತುವರೆದಿದ್ದ ಈ ಪಿತೂರಿಯನ್ನು ಎಂತಹ ಯೋಜನೆ ಮತ್ತು ಎಷ್ಟು ವೇಗವಾಗಿ ಬೇರುಸಹಿತ ಕಿತ್ತುಹಾಕಲಾಯಿತು ಎಂಬುದು ಹಝ್ರತ್ ಅಬೂಬಕರ್(ರ)ರ ಉನ್ನತ ಮಟ್ಟದ ಸಾಮರ್ಥ್ಯ ಹಾಗೂ ಅವರಿಗೆ ಹೆಜ್ಜೆ ಹೆಜ್ಜೆಗೂ ದೇವ ಸಹಾಯ ಲಭಿಸುತ್ತಿತ್ತು ಎಂಬುದಕ್ಕೆ ಹಿಡಿದ ಕನ್ನಡಿಯಾಗಿದೆ. ಒಂದು ವರ್ಷಕ್ಕಿಂತ ಕಡಿಮೆ ಸಮಯದಲ್ಲಿ ಧರ್ಮತ್ಯಾಗದ ಪಿತೂರಿ ಮತ್ತು ದಂಗೆಯ ಮೇಲೆ ನಿಯಂತ್ರಣ ಸಾಧಿಸುವುದು ಮತ್ತು ಅರಬ್ ರಾಜ್ಯದಲ್ಲಿ ಇಸ್ಲಾಮಿನ ಆಡಳಿತವನ್ನು ಪುನಃ ಸ್ಥಾಪನೆಗೊಳಿಸುವುದು ಒಂದು ವಿಸ್ಮಯಕರವಾದ ಕಾರ್ಯಸಾಧನೆಯಾಗಿದೆ. ಹಝ್ರತ್ ಅಬೂಬಕರ್(ರ)ರಿಗೆ ಇಸ್ಲಾಮಿನ ವಿಜಯದಿಂದ ಅತಿಯಾದ ಸಂತೋಷವಿತ್ತು. ಆದರೆ ಈ ಖುಶಿಯಲ್ಲಿ ಗರ್ವ ಮತ್ತು ಅಹಂಕಾರ ಅವರಿಗೆ ನಾಮ ಮಾತ್ರಕ್ಕೂ ಇರಲಿಲ್ಲ. ಏಕೆಂದರೆ ಆದದ್ದೆಲ್ಲ ಅಲ್ಲಾಹನ ಅನುಗ್ರಹ ಮತ್ತು ಕೃಪೆಯಿಂದ ಮಾತ್ರವಾಗಿತ್ತು ಎಂದು ಅವರಿಗೆ ಗೊತ್ತಿತ್ತು. ಬೆರಳೆಣಿಕೆಯಷ್ಟು ಇದ್ದ ಮುಸ್ಲಿಮರ ಮೂಲಕ ಸಂಪೂರ್ಣ ಅರೇಬಿಯದ ಧರ್ಮತ್ಯಾಗಿಗಳ ಶಕ್ತಿಶಾಲಿ ಸೈನ್ಯಗಳನ್ನು ಎದುರಿಸಿ ಅವರನ್ನು ಸೋಲಿಸಿ ಇಸ್ಲಾಮಿನ ಧ್ವಜವನ್ನು ಅತ್ಯಂತ ಪ್ರತಾಪ ಮತ್ತು ವೈಭವಶಾಲಿಯಾಗಿ ಪುನಃ ಮೇಲೇರಿಸುವುದಕ್ಕೆ ಅವರಿಗೆ ಶಕ್ತಿ ಇರಲಿಲ್ಲ.

ಧರ್ಮತ್ಯಾಗಿ ದಂಗೆಗಾರರ ವಿರುದ್ಧ ಯುದ್ಧಗಳು ಮತ್ತು ಕಾರ್ಯಾಚರಣೆಗಳು ಕೊನೆಗೊಂಡ ನಂತರ ಮುಂದಿನ ನಡೆವಳಿಕೆ ಕ್ರಮಗಳ ಕುರಿತು ಆಲೋಚನೆ ಮಾಡುವುದರಲ್ಲಿ ಹಝ್ರತ್ ಅಬೂಬಕರ್(ರ) ನಿರತರಾದರು. ಅರಬ್ ಮತ್ತು ಇಸ್ಲಾಮಿನ ದೀರ್ಘಕಾಲೀನ ಶತ್ರುಗಳಾದ ಇರಾನ್ ಮತ್ತು ರೋಮಿನ ಆಡಳಿತಗಳಿಂದ ಸ್ಥಾಯಿಯಾಗಿ ಸುರಕ್ಷಿತರಾಗಲಿಕ್ಕಾಗಿ ಒಂದು ಸಂಪೂರ್ಣ ಯೋಜನೆಯನ್ನು ಮಾಡಲು ಅವರು ಯೋಚಿಸಿದರು. ಏಕೆಂದರೆ ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ಜೀವಿತ ಕಾಲದಲ್ಲೂ ಈ ಎರಡು ಶಕ್ತಿಗಳು ಅರೇಬಿಯವನ್ನು ತನ್ನ ಅಧೀನದಲ್ಲಿ ಇರಿಸಲು ಬಯಸುತ್ತಿದ್ದುವು. ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅನೇಕ ಪ್ರದೇಶಗಳಲ್ಲಿ ಮತ್ತು ಗೋತ್ರಗಳಲ್ಲಿ ಧರ್ಮತ್ಯಾಗ ಮತ್ತು ಬಂಡಾಯದ ಬೆಂಕಿಯು ಮದೀನದ ಆಡಳಿತವನ್ನು ಆವರಿಸಿದಾಗ ಇದುವೇ ಸರಿಯಾದ ಸಮಯವೆಂದು ಭಾವಿಸಿಕೊಂಡು ಹಿರ್‌ಕಲ್‌ನ ಸೇನೆಗಳು ಸಿರಿಯದಲ್ಲಿ ಮತ್ತು ಇರಾನಿನ ಸೇನೆಗಳು ಇರಾಕಿನಲ್ಲಿ ಒಟ್ಟುಗೂಡಿದುವು. ಹಝ್ರತ್ ಅಬೂಬಕರ್(ರ) ಹಝ್ರತ್ ಖಾಲಿದ್ ಬಿನ್ ವಲೀದ್(ರ)ರಿಗೆ ಹೀಗೆ ಪತ್ರ ಬರೆದರು: ಇರಾಕಿಗೆ ತಲುಪಿ ಜನರನ್ನು ತನ್ನ ಜೊತೆಗೆ ಸೇರಿಸಿರಿ ಮತ್ತು ಅವರನ್ನು ಅಲ್ಲಾಹನ ಕಡೆಗೆ ಆಹ್ವಾನಿಸಿರಿ. ಅವರು ಸ್ವೀಕಾರ ಮಾಡಿದರೆ ಸರಿ, ಇಲ್ಲದಿದ್ದರೆ ಅವರಿಂದ ಜಿಝ್ಯಿಯ ವಸೂಲು ಮಾಡಿರಿ. ಜಿಝ್ಯಿಯ ಕೊಡುವುದನ್ನೂ ನಿರಾಕರಿಸಿದರೆ ಅವರ ವಿರುದ್ಧ ಯುದ್ಧ ಮಾಡಿರಿ.

ಹಝ್ರತ್ ಖಾಲಿದ್ ಬಿನ್ ವಲೀದ್(ರ)ರ ಸೈನಿಕರ ಸಂಖ್ಯೆ ಬಹಳ ಕಡಿಮೆಯಾಗಿತ್ತು. ಏಕೆಂದರೆ, ಒಂದನೆಯದಾಗಿ ಸೇನೆಯ ಬಹುತೇಕ ಪಾಲು ಯಮಾಮ ಯುದ್ಧದಲ್ಲಿ ಭಾಗಿಯಾಗಿತ್ತು. ಮತ್ತೊಂದು, ಸೈನ್ಯದಲ್ಲಿ ಸೇರ್ಪಡೆಯಾಗಲು ಯಾರನ್ನೂ ಒತ್ತಾಯಪಡಿಸಬಾರದು ಎಂದೂ ಧರ್ಮತ್ಯಾಗ ಮಾಡಿದ ನಂತರ ಪುನಃ ಮುಸ್ಲಿಮರಾದ ಯಾರನ್ನೂ ಖಲೀಫರ ಅನುಮತಿ ವಿನಾ ಇಸ್ಲಾಮಿನ ಸೇನೆಯಲ್ಲಿ ಸೇರಿಸಬಾರದು ಎಂದೂ ಹಝ್ರತ್ ಅಬೂಬಕರ್(ರ) ನಿರ್ದೇಶನ ನೀಡಿದ್ದರು. ಹೀಗೆ ಹೆಚ್ಚಿನ ಸಹಾಯಕ ಸೇನೆಗಾಗಿ ವಿನಂತಿಸಲಾದಾಗ ಹಝ್ರತ್ ಅಬೂಬಕರ್(ರ) ಒಬ್ಬ ವ್ಯಕ್ತಿಯಾದ ಖಅ್‌ಖಾಅ್ ಬಿನ್ ಅಮ್ರ್‌ರನ್ನು ಮಾತ್ರ ಕಳುಹಿಸಿದರು. ಜನರು ಅಚ್ಚರಿಪಟ್ಟರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಯಾವ ಸೈನ್ಯದಲ್ಲಿ ಖಅ್‌ಖಾಅ್‌ರಂತಹ ವ್ಯಕ್ತಿ ಇರುವರೋ ಅದು ಎಂದಿಗೂ ಪರಾಜಿತಗೊಳ್ಳದು. ಅನಂತರ ಹಝ್ರತ್ ಖಾಲಿದ್‌ರಿಗೆ ಹೀಗೆ ಬರೆದರು: ಹಝ್ರತ್ ಪೈಗಂಬರ್(ಸ)ರ ನಂತರ ಹಿಂದಿನಂತೆ ಇಸ್ಲಾಮಿನಲ್ಲಿ ಸ್ಥಿರವಾಗಿರುವ ಜನರನ್ನು ಮತ್ತು ಧರ್ಮತ್ಯಾಗಿಗಳ ವಿರುದ್ಧದ ಯುದ್ಧಗಳಲ್ಲಿ ಭಾಗಿಯಾದ ಜನರನ್ನು ಸೈನ್ಯದಲ್ಲಿ ಸೇರ್ಪಡೆಯಾಗಲು ಹುರಿದುಂಬಿಸಿರಿ. ಈ

ಪತ್ರ ಲಭಿಸಿದಾಗ ಹಝ್ರತ್ ಖಾಲಿದ್[ರ] ತನ್ನ ಸೈನ್ಯವನ್ನು ಕ್ರಮಪಡಿಸಲು ಶುರುಮಾಡಿದರು.

ಇರಾಕಿನ ರೈತರಿಗೆ ಸಂಬಂಧಿಸಿ ಹಝ್ರತ್ ಅಬೂಬಕರ್[ರ] ತೋರಿಸಿದ ವಿವೇಕಯುತ ಕಾರ್ಯದ ಬಗ್ಗೆ ಹೀಗೆ ಬರೆಯಲಾಗಿದೆ: ಅರೇಬಿಯರು ಇರಾಕಿನ ಕೃಷಿಭೂಮಿಗಳಲ್ಲಿ ರೈತರಾಗಿ ಕೆಲಸ ಮಾಡುತ್ತಿದ್ದರು. ಇರಾನಿನ ಜಮೀನುದಾರರು ಬಡ ಅರೇಬಿಯರ ಮೇಲೆ ಅತಿಯಾಗಿ ಹಿಂಸೆ ಮಾಡುತ್ತಿದ್ದರು. ಅವರೊಂದಿಗೆ ಗುಲಾಮರಿಗಿಂತ ಕೀಳುತರವಾಗಿ ವರ್ತಿಸುತ್ತಿದ್ದರು. ಯುದ್ಧದ ವೇಳೆ ಅರೇಬಿಯದ ರೈತರಿಗೆ ಯಾವುದೇ ರೀತಿಯ ತೊಂದರೆ ಕೊಡಬಾರದು ಎಂದೂ ಯಾವುದೇ ವಿಧದ ದುವರ್ತನೆ ತೋರಿಸಬಾರದು ಎಂದು ಹಝ್ರತ್ ಅಬೂಬಕರ್[ರ] ಆದೇಶ ನೀಡಿದರು. ಅಲ್ಲಿ ಅರೇಬಿಯರ ಆಡಳಿತ ಸ್ಥಾಪನೆಗೊಂಡರೆ ಅವರ ಪೀಡನೆಯ ಜೀವಿತ ಕೊನೆಗೊಳ್ಳುವುದು ಮತ್ತು ತಮ್ಮ ಸ್ವಂತ ಸಮುದಾಯದ ಜನರ ಕಾರಣದಿಂದ ನೈಜ ನೀತಿ ಮತ್ತು ನ್ಯಾಯಪಾಲನೆ ಹಾಗೂ ಅನುಮತನೀಯವಾದ ಸ್ವಾತಂತ್ರ್ಯ ಮತ್ತು ಸಮಾನತೆಯಿಂದ ಅನುಗ್ರಹೀತವಾಗುವರು ಎಂದು ಅವರಿಗೆ ತಿಳಿಸಬೇಕು ಎಂದು ಅವರು ಹೇಳಿದರು. ಹಝ್ರತ್ ಅಬೂಬಕರ್[ರ]ರ ಯುಕ್ತಿಪೂರ್ಣವಾದ ಈ ನಡವಳಿಕೆಯಿಂದ ಮುಸ್ಲಿಮರಿಗೆ ಅಪಾರವಾದ ಪ್ರಯೋಜನ ಉಂಟಾಯಿತು. ಅವರ ವಿಜಯಗಳ ಮಾರ್ಗಗಳು ಸುಲಭವಾದುವು. ಮುಂದಕ್ಕೆ ಧಾವಿಸುವಾಗ ಹಿಂದಿನಿಂದ ದಾಳಿ ಉಂಟಾಗಿ ಮಾರ್ಗದ ಅಡಚಣೆಯಾಗುವುದು ಎಂಬ ಭಯ ಅವರಿಗೆ ಇಲ್ಲವಾಯಿತು.

ನಂತರದ ಯುದ್ಧಗಳ ಮತ್ತು ವಿಜಯಗಳ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 15-07-2022*

**Summarized by** *Majlis Ansarullah Bharat*

***Kannada Translation***: Moulavi Inamullah for Kannada Desk, Qadian

***Reviewed by***: M.P Ibrahim |***Layout***: U Basheer Ahmad

***Published By***: Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon